ದಿನಾಂಕಃ **21.07.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಂ ಎಸ್ ವಕೀಲರಿಂದಃ-

ಈ ವ್ಯವಹಾರಕ್ಕಿಂತ ಪೂರ್ವದಲ್ಲೂ ಹಣವನ್ನು ನೀಡಿ ವಾಪಸ್ಸು ಪಡೆದಿರುತ್ತೇನೆ. ಆರೋಪಿಗೆ ಈ ಹಿಂದೆ ಎರಡು ಬಾರಿ ಹಣವನ್ನು ಸಾಲವಾಗಿ ನೀಡಿರುತ್ತೇನೆ. ಒಂದು ಸಲ ರೂ. 50,000 ಇನ್ನೊಂದು ಬಾರಿ ಎಷ್ಟು ಹಣ ನೀಡಿರುತ್ತೇನೆ ಎಂದು ನಿಖರವಾಗಿ ನೆನಪಿಲ್ಲ ಸುಮಾರು ರೂ. 70,000 ರಿಂದ 80,000 ನೀಡಿರಬಹುದು. ಆ ಸಮಯದಲ್ಲೂ ಆರೋಪಿ ನನಗೆ ಚೆಕ್ಕನ್ನು ನೀಡಿದ್ದರು. ಸದರಿ ಸಾಲವನ್ನು ಆರೋಪಿ ಮರುಪಾವತಿಸಿದ ನಂತರ ಭದ್ರತೆಗಾಗಿ ನೀಡಿದ ಚೆಕ್ಕನ್ನು ವಾಪಸ್ಸು ಪಡೆದಿರುತ್ತಾರೆ. ಚಿಕ್ಕಮಗಳೂರಿನ ಎಂ ಸಿ ಸುರೇಶ ರವರಿಗೆ ಸುಮಾರು ರೂ. 42,00,000 ಹಣವನ್ನು ನೀಡಿದ್ದೆ. ಈ ಹಣವನ್ನು ನಗದಾಗಿಯೂ ಚೆಕ್ ಮೂಲಕವೂ ಪಾವತಿ ಮಾಡಿರುತ್ತೇನೆ. ನಾನು ಸುರೇಶ ರವರಿಂದ ಚೆಕ್ಕನ್ನು ಸಹ ಪಡೆದಿದ್ದೆ ಎಂದರೆ ಸರಿಯಲ್ಲ.

ನಾನು ಕಡೂರಿನ ವಿದ್ಯಾನಗರದಲ್ಲಿ ವಾಸವಾಗಿರುತ್ತೇನೆ. ನನ್ನ ಮನೆಯ ಸಮೀಪ ಆರೋಪಿಯ ಅಣ್ಣನ ಮಗನ ಮನೆ ಇರುತ್ತದೆ ಎಂದರೆ ಸರಿ. ಆರೋಪಿಯ ತಮ್ಮ ನಾನು ವಾಸಿಸುವ ಬಡಾವಣೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಶಿವಕುಮಾರ್ ನನಗೆ ಗೊತ್ತು, ಅವರು ಕಡೂರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿವಕುಮಾರ್ ರವರು ಈಗ ಮಲ್ಲೇಶ್ವರದಲ್ಲಿ ಮನೆ ಕಟ್ಟಿ ವಾಸಮಾಡುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಶಿವಕುಮಾರ್ ರವರ ಮನೆ ನಿರ್ಮಿಸುವ ಸಲುವಾಗಿ ನನ್ನಿಂದ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಶಿವಕುಮಾರ್ ರವರಿಗೆ ಸಾಲ ನೀಡುವಾಗ ನಿಪಿ-1 ರ ಚೆಕ್ಕನ್ನು ಭದ್ರತೆಗಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಶಿವಕುಮಾರ್ ರವರು ನೀಡಿರುವ ಚೆಕ್ಕನ್ನು ಅವರು ಸಾಲ ಮರುಪಾವತಿ ಮಾಡಿದ್ದರೂ ಸಹ ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿರುವ ಸಹಿ, ದಿನಾಂಕ ಮತ್ತು ಒಕ್ಕಣೆಯು ಬೇರೆ ಬೇರೆ ಹಸ್ತಾಕ್ಷರ ಮತ್ತು ಬೇರೆ ಬೇರೆ ಶಾಯಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ ಚೆಕ್ಕನ್ನು ಪೂರ್ಣವಾಗಿ ತುಂಬಿ ನನಗೆ ನೀಡಿರುತ್ತಾರೆ. ಆರೋಪಿ ಜೊತೆ ಬಂದಿದ್ದ ಇನ್ನೊಬ್ಬ ವ್ಯಕ್ತಿ ನಿಪಿ-1 ನ್ನು ಬರೆದಿರುತ್ತಾರೆ ಆದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಶಿವಕುಮಾರ್ ರವರು ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನ ಮೇಲೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಓ ಎಸ್ 52ಃ2022 ನ್ನು ಹೂಡಿರುತ್ತೇನೆ ಎಂದರೆ ಸರಿ. ಆರೋಪಿಯು ನನ್ನಿಂದ ಯಾವುದೇ ಹಣವನ್ನು ಪಡೆಯದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ ಮತ್ತು ಆದಾಯ ತೆರಿಗೆ ವಿವರವನ್ನು ಸಲ್ಲಿಸಿರುವುದಿಲ್ಲ. ನನಗೆ ಆದಾಯ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಬಡ್ಡಿಗೆ ಹಣವನ್ನು ನೀಡಿ ಭದ್ರತೆಗಾಗಿ ಚೆಕ್ಕನ್ನು ಪಡೆದುಕೊಂಡು ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲೇವಾದೇವಿ ಲೈಸೆನ್ಸ್ ಪಡೆದಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಲೇವಾದೇವಿ ವ್ಯವಹಾರ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯ ಕುಟುಂಬದ ಹಿನ್ನೆಲೆ ನನಗೆ ಗೊತ್ತು. ಆರೋಪಿಗೆ ಜಮೀನು, ತೋಟ ಇದೆ ಎಂದರೆ ಸರಿ. ಅವರಿಗೆ ವ್ಯವಸಾಯದಿಂದ ವಾರ್ಷಿಕ ರೂ. 5 ರಿಂದ 10 ಲಕ್ಷ ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ನನ್ನ ಬಳಿ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಶಿವಕುಮಾರ್ ರವರು ಮನೆ ಕಟ್ಟಲು ನನ್ನ ಬಳಿ ಪಡೆದ ಸಾಲಕ್ಕೆ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಸಾಲವಾಗಿ ನೀಡದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.